ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ/ಅ.ಕಾ.ನಿ/03/2015-16

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-12
ದಿನಾಂಕ: 14-03-2016

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ನಂ:04, ಡಿ.ಎಸ್.ಇ.ಆರ್.ಟಿ.
100ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು-560085.

ಮಾನ್ಯರೆ,

ವಿಷಯ: NCF- 2005ರ ಆಧಾರಿತ ಅಂಧ/ಕಲಿಕಾ ನ್ಯೂನತೆಯುಳ್ಳ ವಿದ್ಯಾರ್ಥಿಗಳಿಗಾಗಿ 08 ಮತ್ತು 09ನೇ ತರಗತಿ ಪಠ್ಯಪುಸ್ತಕ ರಚನಾ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳನ್ನು ರಚನಾಕಾರರಾಗಿ ನಿಯೋಜಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಕ.ಪ.ಪು.ಸಂ8,9ನೇ ತರಗತಿ ಅಂಕ.ನ್ಯೂ 01/2015-16 ದಿನಾಂಕ:16-12-2015.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 08 ಮತ್ತು 09ನೇ ತರಗತಿ ಅಂಧ/ಕಲಿಕಾ ನ್ಯೂನತೆಗಳುಳ್ಳ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಪರ್ಯಾಯವಾಗಿ ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ ಪಠ್ಯಪುಸ್ತಕಗಳನ್ನು ರಚಿಸಲು ಕಾಲೇಜುಗಳ ಕೆಲವು ಉಪನ್ಯಾಸಕರನ್ನು ನಿಯೋಜಿಸಲು ಕೋರಿರುತ್ತೀರಿ. ಇದರಂತೆ ನೀವು ಸೂಚಿಸಿರುವ ಉಪನ್ಯಾಸಕರು ಪಠ್ಯಪುಸ್ತಕ ರಚನೆಯಲ್ಲಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಈ ಪಠ್ಯ ಪುಸ್ತಕ ರಚನಾ ಕಾರ್ಯ ಮುಗಿಯುವವರೆಗೆ ಮಾತ್ರ ಸಭೆ/ಕಾರ್ಯಾಗಾರಗಳಲ್ಲಿ ಭಾಗವಹಿಸಲು ಅನುಮತಿಸಿದೆ. ಆದರೆ ನಮ್ಮ ಇಲಾಖೆಯಲ್ಲಿ ಇವರುಗಳು ಪಠ್ಯಕ್ರಮವನ್ನು ಪೂರ್ಣಗೊಳಿಸುವ ಜವಾಬ್ದಾರಿ, ಪರೀಕ್ಷಾ ಕಾರ್ಯ, ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗ ಬೇಕಾಗಿರುತ್ತದೆ. ಉಪನ್ಯಾಸಕರುಗಳ ಪಟ್ಟಿಯನ್ನು ಅನುಬಂಧದಲ್ಲಿ ಕೊಡಲಾಗಿದೆ. ಸಭೆ ಏರ್ಪಡಿಸಿದಾಗ ಸಂಬಂಧಪಟ್ಟ ಉಪನ್ಯಾಸಕರುಗಳಿಗೆ ಹಾಗೂ ಆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸಭಾಸೂಚನೆ ಕಳುಹಿಸುವುದು, ಭಾಗವಹಿಸಿದ ದಿನಗಳಿಗೆ ಸದರಿಯವರಿಗೆ ಹಾಜರಾತಿ ಪ್ರಮಾಣ ಪತ್ರ ನೀಡಲು ಕೋರಿದೆ.

ಈ ಉಪನ್ಯಾಸಕರುಗಳು/ಪ್ರಾಂಶುಪಾಲರು ಕಾರ್ಯಾಗಾರದಲ್ಲಿ ಭಾಗವಹಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ನಷ್ಟವಾಗುವ ತರಗತಿಗಳನ್ನು ವಿಶೇಷ ತರಗತಿ ತೆಗೆದುಕೊಂಡು ಬೋಧನೆಯಲ್ಲಿ ಪಠ್ಯಕ್ರಮಕ್ಕೆ ಯಾವುದೇ ರೀತಿಯಲ್ಲಿ ಚ್ಯುತಿ ಬರದಂತೆ ಪೂರ್ಣಗೊಳಿಸಬೇಕು. ಈ ಉಪನ್ಯಾಸಕರುಗಳು ಯಾವುದೇ ಪರೀಕ್ಷೆ/ಮೌಲ್ಯಮಾಪನ ಕಾರ್ಯಗಳಿಗೆ ಚ್ಯುತಿ ಬರದಂತೆ ಕಾರ್ಯ ನಿರ್ವಹಿಸಲು ತಿಳಿಸಿದೆ.

ಇವರಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಯಾವುದೇ ದಿನಭತ್ಯೆ ಹಾಗೂ ಪ್ರಯಾಣ ಭತ್ಯೆ ನೀಡಲಾಗುವುದಿಲ್ಲ.

..2

[illegible] ಉಪ ನಿರ್ದೇಶಕರುಗಳು ಸದರಿ ಸಂಪನ್ಮೂಲ ವ್ಯಕ್ತಿಗಳು ಈ ಪಠ್ಯಪುಸ್ತಕ ರಚನಾ ಕಾರ್ಯ ಪೂರ್ಣಗೊಳ್ಳುವವರೆಗೆ ಮಾತ್ರ ಹಾಜರಾಗುವಂತೆ ನೋಡಿಕೊಳ್ಳಬೇಕು. ಹಾಗೂ ಈ ಅವಧಿಯಲ್ಲಿ ಕಾಲೇಜಿನ ದಿನ ನಿತ್ಯದ ಶೈಕ್ಷಣಿಕ ಕೆಲಸಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಜಂಟಿ ನಿರ್ದೇಶಕರು, (ಆಡಳಿತ) ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
2. ಜಂಟಿ ನಿರ್ದೇಶಕರು, (ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
3. ಜಿಲ್ಲಾ ಉಪ ನಿರ್ದೇಶಕರುಗಳಿಗೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ತುಮಕೂರು , ಮಂಡ್ಯ, ರಾಮನಗರ, ಹಾಸನ.
4. ನಿರ್ದೇಶಕರ ಆಪ್ತಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ,
5. ಸಂಬಂಧಪಟ್ಟ ಪ್ರಾಂಶುಪಾಲರಿಗೆ,- ಪಠ್ಯಪುಸ್ತಕ ಸಂಘ ಸಭೆ ಏರ್ಪಡಿಸಿದಾಗ ಈ ಉಪನ್ಯಾಸಕರನ್ನು ಅನ್ಯಕಾರ್ಯ ನಿಮಿತ್ತ ಮೇಲೆ ಬಿಡುಗಡೆ ಮಾಡಲು ಸೂಚಿಸಿದೆ.
6. ಸಂಬಂಧಪಟ್ಟ ಉಪನ್ಯಾಸಕರುಗಳಿಗೆ
7. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮುಂದಿನ ಕ್ರಮಕ್ಕಾಗಿ.
8. ಕಛೇರಿ/ಹೆಚ್ಚುವರಿ.

**ಸಂಪನ್ಮೂಲ ವ್ಯಕ್ತಿಗಳ ಪಟ್ಟಿ:**

| ಕ್ರಮ ಸಂಖ್ಯೆ | ಸಮಾಜಶಾಸ್ತ್ರ | ಅರ್ಥಶಾಸ್ತ್ರ | ರಾಜ್ಯಶಾಸ್ತ್ರ |
|---|---|---|---|
| 1 | ನಾಗರಾಜು, ಉಪನ್ಯಾಸಕರು, ಎಸ್.ಎಲ್.ಎನ್.ಕಾಲೇಜು, ಕೋಟೆ, ಬೆಂಗಳೂರು. | ಜಿ.ಎನ್. ಕೆಂಪಯ್ಯ, ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮಸ್ಕಲ್, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ. | ಪೂರ್ಣಚಂದ್ರ ಟಿ.ಜಿ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಬೇಲೂರು, ಹಾಸನ ಜಿಲ್ಲೆ. |
| 2. | – | ವಿ. ದೀಪಾ, ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಹೊನ್ನವರ, ನಾಗಮಂಗಲ ತಾಲ್ಲೂಕು, ಮಂಡ್ಯಜಿಲ್ಲೆ. | – |
| 3 | – | ಬಿ.ಎಂ ಜಗದೀಶ್, ಉಪನ್ಯಾಸಕರು, ಪದವಿ ಪೂರ್ವ ಕಾಲೇಜು, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ. | – |
| 4 | – | ಆರ್. ಚಿತ್ರ, ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮಾಡ್ಬಾಳ್, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ. | – |

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.